


ಬೆಂಗಳೂರಿನಲ್ಲಿ ನಡೆದ ಚಿತ್ರಸಂತೆಯಲ್ಲಿ ಶಿವರಾಜ್ ಅವರ ಕಲಾಕೃತಿಗಳ ಪ್ರದರ್ಶನ



ಹೆಲಿಕಾಪ್ಟರ್ ಕಲಾಕೃತಿ ತಯಾರಿಸಿರುವ ಶಿವರಾಜ್

# ಗುಜರಿ ವಸ್ತುಗಳಲ್ಲಿ ಬೈಕ್!

**ಹರಿಹರದ ಶಿವರಾಜ್, ಗುಜರಿ ವಸ್ತುಗಳಿಂದ ಬೈಕ್ ಕಲಾಕೃತಿಗಳನ್ನು ತಯಾರಿಸುವುದರಲ್ಲಿ ಸಿದ್ಧಹಸ್ತರು. ಅವರ ಬೈಕ್ ಕಲಾಕೃತಿಗಳು ಸಹೃದಯರ ಮನಸ್ಸಿನಲ್ಲಿ ಸದ್ದು ಮಾಡುತ್ತಿವೆ.**

**■ ರಮೇಶ ಕೆ.**



ಅದೊಂದು ಪುಟ್ಟ ಬೈಕ್. ಪುಟಾಣಿಗಳು ಕಣ್ಣರಳಿಸಿ ನೋಡುತ್ತಿದ್ದರು. ಆ ಚಿಣ್ಣರ ಕುತೂಹಲಕ್ಕೆ ಕಾರಣವಾಗಿದ್ದುದು, ಹಳೆಯ ಸೈಕಲ್ ಚೈನ್, ಬೋಲ್ಟ್, ನಟ್ಟುಗಳು ಹಾಗೂ ಕಬ್ಬಿಣದ ಚೂರುಗಳಿಂದ ಆ ಬೈಕ್ ರೂಪುಗೊಂಡಿದ್ದುದು!

'ಮೈಸೂರು ಉತ್ಸವ'ದ ಅಂಗವಾಗಿ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಈಚೆಗೆ ಆಯೋಜಿಸಿದ್ದ 'ಚಿತ್ರಸಂತೆ'ಯಲ್ಲಿ ಗುಜರಿ ವಸ್ತುಗಳಿಂದ ರೂಪುಗೊಂಡ ಬೈಕ್ ಪ್ರದರ್ಶನಗೊಂಡಿತ್ತು. ದಾವಣಗೆರೆ ಜಿಲ್ಲೆಯ ಹರಿಹರದ ಕಲಾವಿದ ಎಸ್. ಶಿವರಾಜ್, ಗುಜರಿ ವಸ್ತುಗಳಿಂದ ಮಾಡಿದ್ದ ಬಗೆಬಗೆ ಆಲಂಕಾರಿಕ ಬೈಕ್‌ಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. 'ಕೆಜಿಎಫ್' ಸಿನಿಮಾದಲ್ಲಿ ಬಳಸಿದ ಬೈಕ್‌ನ ಮಾದರಿಗಳು ಹೆಚ್ಚು ಆಕರ್ಷಣೀಯವಾಗಿದ್ದವು. ಸ್ಪೋರ್ಟ್ಸ್ ಬೈಕ್, ಮರದ ಗಿಟಾರ್, ಬೌಲ್‌ಗಳೂ ಪ್ರದರ್ಶನದಲ್ಲಿದ್ದವು.

ಕಲಾವಿದ ಶಿವರಾಜ್ ಅವರು ಬೈಕ್ ಕಲಾಕೃತಿ ಮಾಡುವುದನ್ನು ಕಲಿತ ಕಥೆಯೇ ಆಸಕ್ತಿದಾಯಕವಾಗಿದೆ. ಎಸ್‌ಎಸ್‌ಎಲ್‌ಸಿ ಮುಗಿದ ಮೇಲೆ ಹರಿಹರದ ಕಬ್ಬಿಣದ ಕಾರ್ಖಾನೆಯಲ್ಲಿ ಅವರು ಉದ್ಯೋಗಕ್ಕೆ ಸೇರಿಕೊಂಡರು. ಜೀವನದಲ್ಲಿ ಏನಾದರೂ ಸಾಧಿಸಬೇಕು ಎನ್ನುವ ಹಂಬಲ ಕಾಡತೊಡಗಿತು. ಬೆಂಗಳೂರಿಗೆ ಬಂದ ಶಿವರಾಜ್, ಒಳಾಂಗಣ ವಿನ್ಯಾಸದ ಕ್ಷೇತ್ರಕ್ಕೆ ಕಾಲಿಟ್ಟರು. ಮರ, ಫೈಬರ್ ಹಾಗೂ ಕಬ್ಬಿಣದಲ್ಲೇ ಕ್ರಿಯಾಶೀಲ ಕೆಲಸಗಳನ್ನು ಮಾಡುವಲ್ಲಿ ನೈಪುಣ್ಯ ಸಾಧಿಸಿದರು. ಮರದ ಗಣೇಶ, ಗಿಟಾರ್ ಮಾಡುವುದನ್ನು ಕಲಿತರು. ಒಮ್ಮೆ ಯೂಟ್ಯೂಬ್‌ನಲ್ಲಿ ಗುಜರಿ ವಸ್ತುಗಳನ್ನು ಬಳಸಿ ಮಾಡಿದ ಬೈಕ್ ಗಮನ ಸೆಳೆಯಿತು. ಆ ಕಲೆಯನ್ನು ಕಲಿಯಬೇಕೆಂಬ ಛಲ ಅವರಲ್ಲಿ ಹುಟ್ಟಿತು. ಅವರೇ ಪುಟ್ಟದೊಂದು ವೆಲ್ಡಿಂಗ್ ಶಾಪ್ ಇಟ್ಟುಕೊಂಡು, ಸಂಜೆ ವೇಳೆ ಎಂಟು ಇಂಚಿನ ಬೈಕ್‌ಗಳನ್ನು ಮಾಡತೊಡಗಿದರು. ಒಂದು 'ಬೈಕ್' ಮಾಡಲು ಐದು ಗಂಟೆ ಸಮಯ ತೆಗೆದುಕೊಂಡರು.

'ಆರಂಭದಲ್ಲಿ ಫಿನಿಷಿಂಗ್ ಸರಿ ಇರುತ್ತಿರಲಿಲ್ಲ, ಜೋಡಣೆ ಸರಿಯಾಗಿ ಆಗುತ್ತಿರಲಿಲ್ಲ, ವೆಲ್ಡಿಂಗ್ ಶಾಪ್ ಪಕ್ಕ ಸಿಗರೇಟ್ ಸೇದಲು ಬರುತ್ತಿದ್ದ ಸಾರ್ವಜನಿಕರು ನನ್ನ ಕೆಲಸ ನೋಡಿ ಸಲಹೆ ಕೊಡುತ್ತಿದ್ದರು. ಅವರ ಸಲಹೆಗಳೇ ನನಗೆ ಮಾರ್ಗದರ್ಶನವಾಯಿತು. ಒಂದು ವರ್ಷ ಕಷ್ಟಪಟ್ಟೆ. ಹವ್ಯಾಸಕ್ಕಾಗಿ ನಾನು ಮಾಡತೊಡಗಿದ್ದು ಕಲೆಯ ಸ್ವರೂಪ ಪಡೆದುಕೊಳ್ಳತೊಡಗಿತು. ಕಲಾಕೃತಿಗಳನ್ನು ಮೊದಲಿಗೆ ಬೆಂಗಳೂರಿನ ಚಿತ್ರಸಂತೆಯಲ್ಲಿ ಪ್ರದರ್ಶನಕ್ಕೆ ಇಟ್ಟೆ. ಜನರಿಂದ ಮೆಚ್ಚುಗೆ ಸಿಕ್ಕಿತು. ಈಗ ಕಲಾ ಪ್ರದರ್ಶನಗಳು ಎಲ್ಲಿ ನಡೆಯುತ್ತವೆಯೋ ಅಲ್ಲಿಗೆ ಹೋಗುತ್ತೇನೆ' ಎಂದು ಹೇಳುತ್ತಾರೆ ಶಿವರಾಜ್.

ಯಶ್ ಅಭಿನಯದ 'ಕೆಜಿಎಫ್' ಸಿನಿಮಾ ಬಿಡುಗಡೆಯಾದ ಸಂದರ್ಭದಲ್ಲಿ ಶಿವರಾಜ್, 2 ಅಡಿ ಅಳತೆಯ ಬೈಕ್ ತಯಾರಿಸಿ ಗಮನ ಸೆಳೆದಿದ್ದರು. ಸದ್ಯ ಅವರು ಹರಿಹರದಲ್ಲಿ ವರ್ಕ್‌ಶಾಪ್ ನಡೆಸುತ್ತಿದ್ದು, ಕಬ್ಬಿಣದ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ಕಲೆಯನ್ನೂ ಪ್ರೀತಿಸುತ್ತಿದ್ದಾರೆ.

ಮರದ ಆಲಂಕಾರಿಕ ವಸ್ತುಗಳು, ಬೈಕ್‌ಗಳು, ಹೆಲಿಕಾಪ್ಟರ್, ಸಮಕಾಲೀನ ಕಲಾಕೃತಿ, ಮರದ ಗಣೇಶ ಮೂರ್ತಿ, ಗೃಹೋಪಯೋಗಿ ವಸ್ತುಗಳನ್ನು ಮಾಡುವುದರಲ್ಲೂ ಶಿವರಾಜ್ ಎತ್ತಿದ ಕೈ. ಅವರ ಕೆಲಸಕ್ಕೆ ಹಲವು ಸಂಸ್ಥೆಗಳು ಪ್ರಶಂಸೆ ವ್ಯಕ್ತಪಡಿಸಿವೆ.

ಪ್ರತಿಕ್ರಿಯಿಸಿ: feedback@sudha.co.in